ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:  ದಿನಾಂಕ : DATE : 20/12/19

# ಟ್ರಂಪ್ ವಾಗ್ದಂಡನೆ ನಿರ್ಣಯ ಅಂಗೀಕಾರ

**ವಾಷಿಂಗ್ಟನ್:** ಅಧಿಕಾರ ದುರ್ಬಳಕೆ ಮತ್ತು ಸಂಸತ್ ತನಿಖೆಗೆ ಅಡ್ಡಿಪಡಿಸಿದ ಆರೋಪದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಅಮೆರಿಕದ ಸಂಸತ್ತಿನ ಕೆಳಮನೆ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ ಮಂಡನೆಯಾದ ವಾಗ್ದಂಡನೆ ನಿರ್ಣಯ ಅಂಗೀಕಾರವಾಗಿದೆ. ಈ ಮೂಲಕ ಅಮೆರಿಕದ ಇತಿಹಾಸದಲ್ಲಿ ವಾಗ್ದಂಡನೆಕ್ಕೆ ಗುರಿಯಾದ ನಾಲ್ಕನೇ ಅಧ್ಯಕ್ಷ ಎಂಬ ಕುಖ್ಯಾತಿಗೆ ಟ್ರಂಪ್ ಗುರಿಯಾಗಿದ್ದಾರೆ.



ಬುಧವಾರ ಸುಮಾರು 8 ತಾಸುಗಳ ದೀರ್ಘಾವಧಿ ಚರ್ಚೆ ಬಳಿಕ ಟ್ರಂಪ್ ವಿರುದ್ಧ ವಾಗ್ದಂಡನೆ ನಿರ್ಣಯವನ್ನು ಮತಕ್ಕೆ ಹಾಕಲಾಯಿತು. ಅದರಲ್ಲಿ ಎರಡು ಭಾಗಗಳಿದ್ದವು. ಅಧಿಕಾರ ದುರ್ಬಳಕೆ ಮಾಡಿಕೊಂಡು ಉಕ್ರೇನ್ ಅಧ್ಯಕ್ಷರ ಮೇಲೆ ಒತ್ತಡ ಹೇರಿದ ಹಾಗೂ ಅಧಿಕಾರ ದುರ್ಬಳಕೆ ಮಾಡಿಕೊಂಡು ಸಂಸತ್ ತನಿಖೆಗೆ ಅಡ್ಡಿಪಡಿಸಿದ ಆರೋಪವಿತ್ತು. ಎರಡೂ ನಿರ್ಣಯಗಳು ಕ್ರಮವಾಗಿ 230-197 ಹಾಗೂ 229-198 ಅಂತರದಿಂದ ಅಂಗೀಕಾರಗೊಂಡವು. ಅಚ್ಚರಿಯ ನಡೆಯಲ್ಲಿ ಪ್ರತಿಪಕ್ಷದ ಇಬ್ಬರು ಸಂಸದರು ವಾಗ್ದಂಡನೆ ವಿರೋಧಿಸಿ, ಮತ ಚಲಾಯಿಸಿದ್ದಾರೆ. ಮಿನ್ನೆಸೋಟ ಸಂಸದ ಕೊಲ್ಲಿನ್ ಪೀಟರ್ ಸನ್ ಮತ್ತು ನ್ಯೂಜೆರ್ಸಿ ಸಂಸದ ಜೆಫ್ ವ್ಯಾನ್ ಡ್ರ್ಯೂ ಅವರು ಅಧ್ಯಕ್ಷ ಟ್ರಂಪ್ ಪರವಾಗಿ ನಿಂತಿದ್ದಾರೆ.

ಸಂಸತ್‌ನ ಮೇಲ್ಮನೆಯಾದ ಸೆನೆಟ್‌ನಲ್ಲಿ ಮುಂದಿನ ವಾರ ನಿರ್ಣಯ ಮಂಡನೆಯಾಗಿ ಚರ್ಚೆ ಆರಂಭವಾಗಲಿದೆ. ಸದನದಲ್ಲಿ ಟ್ರಂಪ್ ಪಕ್ಷಕ್ಕೆ ಬಹುಮತ ಇರುವುದರಿಂದ ಅಲ್ಲಿ ನಿರ್ಣಯಕ್ಕೆ ಸೋಲಾಗುವ ಸಾಧ್ಯತೆ ಇದೆ.

## ಪ್ರತಿಪಕ್ಷಗಳಿಗೆ ಟಾಂಗ್

ವಾಗ್ದಂಡನೆ ನಿರ್ಣಯ ಮಂಡನೆಯಾದ ದಿನದಿಂದಲೂ ಅಧ್ಯಕ್ಷ ಟ್ರಂಪ್ ಅವರು ಸರಣಿ ಟ್ವೀಟ್‌ಗಳ ಮೂಲಕ ಪ್ರತಿಪಕ್ಷಗಳ ವಿರುದ್ಧ ಹರಿಹಾಯುತ್ತಿದ್ದಾರೆ. ''ಅಧ್ಯಕ್ಷರ ಮೇಲಿನ ದೌರ್ಜನ್ಯವಿದು. ವಾಗ್ದಂಡನೆ ಖಂಡಿಸಿ ರಿಪಬ್ಲಿಕನ್ ಸಂಸದರು ಒಗ್ಗಟ್ಟಿನಿಂದ ಮತ ಹಾಕಿದ್ದು ಅಮೆರಿಕದ ಚರಿತ್ರೆಯಲ್ಲಿ ದಾಖಲಾಗಲಿದೆ,'' ಎಂಬ ಸರಣಿ ಟ್ವೀಟ್‌ಗಳ ಸುರಿಮಳೆಯನ್ನು ಟ್ರಂಪ್ ಸುರಿಸುತ್ತಿದ್ದಾರೆ.